ಶಾಲೆಗಳನ್ನಾಗಲಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಲಿ ನೀಡುತ್ತಿಲ್ಲ. ಇದಕ್ಕೆ ಆಯುವ್ಯಯದಲ್ಲಿ ಅವಕಾಶ ಇಲ್ಲ. ಈ ಸರ್ಕಾರ ಬಂದ ಮೇಲೆ ಇಲ್ಲಿಯವರೆಗೂ 460 ಪ್ರೌಢ ಶಾಲೆಗಳನ್ನು 65 ಪದವಿ ಪೂರ್ವ ಕಾಲೇಜುಗಳನ್ನು ನೀಡಿದ್ದೇವೆ. ಈ ವರ್ಷ ಯಾವುದೇ ಪ್ರೌಢ ಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ನೀಡಲು ಅವಕಾಶ ಇರುವುದಿಲ್ಲ.

(ಚ) ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪನಿ ಕುರಿತು.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪನಿ ಸುಮಾರು 4600 ಜನ ಉದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟಿತ್ತು. ಇದು ನಮ್ಮ ರಾಜ್ಯದ ಒಂದು ಪ್ರತಿಷ್ಠಿತವಾದ ಸಂಸ್ಥೆ ಕೂಡ ಆಗಿತ್ತು. ಇತ್ತೀಚಿನ 12, 96ರ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ರಾಜ್ಯದ ಶಿವಮೊಗ್ಗ ವಿಭಾಗದ ಕುಂಪ್ಲಿ ಹಾರನಹಳ್ಳಿ, ಕರಕುಚ್ಚಿ ಕುಮದಾವತಿ, ಮತ್ತು ಕಾರವಾರ ಬಳ್ಳಾರಿ ಜಿಲ್ಲೆಯ ವಿಭಾಗದಲ್ಲಿ ಅನೇಕ ಗಣಿಗಳು ಮುಚ್ಚಲ್ಪಟ್ಟವು. ಇದರಿಂದಾಗಿ ಸಾಕಷ್ಟು ಜನರಿಗೆ ನಿರುದ್ಯೋಗ ಮತ್ತು ಆ ಸಂಸ್ಥೆಯಲ್ಲಿರತಕ್ಕಂಥ ಉದ್ಯೋಗಿಗಳಿಗೆ ಈಗ ಸಂಬಳವನ್ನು ಕೊಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಕಳೆದ 2-3 ತಿಂಗಳಿನಿಂದ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಸಂಬಳ ಮತ್ತು ಭತ್ಯೆಗಳು ಸಿಗುತ್ತಿಲ್ಲ. ಗಣಿಗಳು ಕೆಲವು ಮುಚ್ಚಿದ್ದಾವೆ. ಆಡಳಿತ ಮಂಡಲಿಯವರು ಒಂದು ನಿರ್ಧಾರವನ್ನು ತೆಗೆದುಕೊಂಡರು. ಸ್ವಯಂ ನಿವೃತ್ತಿ ಘೋಷಣೆ ಮಾಡತಕ್ಕಂಥವರಿಗೆ ಆರ್ಥಿಕ ಸೌಲತ್ತುಗಳನ್ನು ಕೊಟ್ಟು ಕಳುಹಿಸುತ್ತೇವೆಂದು ಹೇಳಿದರು. ಇದರಿಂದ 31-10-98ರಲ್ಲಿ ಸ್ವಯಂ ನಿವೃತ್ತಿಯನ್ನು ಸುಮಾರು 1308 ಜನ ಉದ್ಯೋಗಿಗಳು ಘೋಷಣೆ ಮಾಡಿಕೊಂಡರು. ಅವತ್ತಿನಿಂದ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಅವರನ್ನು ಸ್ವಯಂ ನಿವೃತ್ತಿ ಮಾಡಿತು ಇಲಾಖೆ. 1-12-1998ರ ಒಳಗಾಗಿ ಅವರಿಗೆ ಕೊಡಬೇಕಾದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಕೊಡಬೇಕಾಗಿತ್ತು. ಆದರೆ ದುರಂತ ಅಂದರೆ ಅವರಿಗೆ ಇದುವರೆಗೂ ಸ್ವಯಂ ನಿವೃತ್ತಿ ವೇತನವನ್ನಾಗಲಿ ಬೇರೆ ಯಾವುದನ್ನು ಕೊಟ್ಟಿಲ್ಲ. ಅವರಿಗೆ ಉದ್ಯೋಗ ಇಲ್ಲ, ಅವರನ್ನು ಅವಲಂಬಿಸಿರುವ ಇಡೀ ಕುಟುಂಬ ಇವತ್ತಿನ ದಿವಸ ಬೀದಿ ಮೇಲೆ ನಿಂತಿದೆ. 31-3-99ರೊಳಗಾಗಿ ಕೊಡುತ್ತೇವೆ ಎಂದು ಅವರು ಆಶ್ವಾಸನೆಯನ್ನು ಕೊಟ್ಟರು. ದಿನಾಂಕ 5-4-99ರಲ್ಲಿ ಹೋಗಿ ಕೇಳಿದರೆ ಅವರು ನಮ್ಮಲ್ಲಿ ಹಣ ಇಲ್ಲ ನಾವು ಏನು ಮಾಡುವುದೆಂದು ಹೇಳುತ್ತಾರೆ. ಇವತ್ತು ಅಲ್ಲಿ ಇರತಕ್ಕಂಥ ಉದ್ಯೋಗಿಗಳನ್ನು ಖಾಲಿ ಇರುವಂಥಹ ಇಲಾಖೆಗಳಿಗೆ ಹಾಕಬೇಕೆಂದು ಹೇಳಿ ಹೊಸಜಿಲ್ಲೆಗಳನ್ನು ಏನು ನಿರ್ಮಾಣ ಮಾಡಿದ್ದಾರೆ, ಆ ಜಿಲ್ಲಾ ಕಛೇರಿಗಳಿಗೆ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ

ಖಾಲಿ ಇರುವಂತಹ ಇಲಾಖೆಗಳಿಗೆ ನೇಮಕ ಮಾಡಲು ಆದೇಶ ಕೊಡುತ್ತೇವೆಂದು ಹೇಳಿದರು. ಉದ್ಯೋಗ ಕೊಡಲಿಲ್ಲ. ಮತ್ತು ಸಂಬಳ ಸೌಲಭ್ಯಗಳನ್ನೂ ಕೊಡಲಿಲ್ಲ. 1308 ಜನ ಉದ್ಯೋಗಿಗಳು ಏನು ಸ್ವಯಂ ನಿವೃತ್ತಿಯನ್ನು ಘೋಷಣೆ ಮಾಡಿಕೊಂಡಿದ್ದಾರೆ 31-10-98ಕ್ಕೆ ಅವತ್ತಿನಿಂದ ಇವತ್ತಿನವರೆಗೂ ಒಂದು ಪೈಸೆ ಸಂಬಳ ಅವರಿಗೆ ಕೊಡಲಿಲ್ಲ. ಇಡೀ ಅವರ ಕುಟುಂಬಗಳು ಕಣ್ಣೀರು ಸುರಿಸುತ್ತಿದೆ. ತಾವು ಅವರಿಗೆ ಹಣವನ್ನು ಯಾವಾಗ ಕೊಡುತ್ತೀರಿ? ಆ ಕುಟುಂಬಗಳಿಗೆ ನ್ಯಾಯ ದೊರಕಿಸಿಕೊಡುವುದು ಯಾವಾಗ? ಈಗ ಇರತಕ್ಕಂಥ ಉದ್ಯೋಗಿಗಳಿಗೆ ಬೇರೆ ಇಲಾಖೆಗಳಲ್ಲಿ ಉದ್ಯೋಗ ಕೊಡುವುದಕ್ಕೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ? ಈ ಬಗ್ಗೆ ಸರ್ಕಾರ ಉತ್ತರ ಕೊಡಬೇಕು ಮತ್ತು ಸ್ವಯಂ ನಿವೃತ್ತಿ ಘೋಷಣೆ ಮಾಡಿಕೊಂಡಿರತಕ್ಕ ಕುಟುಂಬಗಳಿಗೆ ಹಣಕಾಸು ಬೇಗ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಬಿ.ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದು ನಿಜ ಇದೆ. 1998ರಲ್ಲಿ ಸುಮಾರು 1200 ಜನ ಉದ್ಯೋಗಿಗಳು ಸ್ವಯಂ ನಿವೃತ್ತಿ ಯೋಜನೆಗೆ ಒಳಗಾಗಿದ್ದಾರೆ. ಅದರಲ್ಲಿ ಸುಮಾರು 200 ಜನರಿಗೆ ನಾವು ಹಣ ಕೊಟ್ಟಿದ್ದೇವೆ. ಮೈಸೂರು ಮಿನರಲ್ಸ್ ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಇವತ್ತು ಬಹಳ ಕೆಟ್ಟಿದೆ. ಅವರು ಸರ್ಕಾರಕ್ಕೆ ಸಹ ಅರ್ಜಿ ಕೊಟ್ಟಿದ್ದಾರೆ. ಸರ್ಕಾರ ಈ ಬಗ್ಗೆ ತೀವ್ರ ಪರಿಶೀಲನೆ ಮಾಡುತ್ತಿದೆ. ನಾನು ನಿನ್ನೆ ಸಹ ಮಾನ್ಯ ಹಣಕಾಸಿನ ಸಚಿವರ ಜೊತೆಯಲ್ಲಿ ಮೀಟಿಂಗ್ ಮಾಡಿ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಹಣವನ್ನು ಸಹ ಇದಕ್ಕೆ ಇಟ್ಟಿದ್ದೇವೆ. ಮಾನ್ಯ ಹಣಕಾಸಿನ ಸಚಿವರು ತಕ್ಷಣ ಎರಡು ಮೂರು ದಿವಸಗಳಲ್ಲಿ ಹಣ ಬಿಡುಗಡೆ ಮಾಡುತ್ತೇನೆಂದು ಹೇಳಿದ್ದಾರೆ. ಮುಖ್ಯವಾಗಿ ಇದು ಆಗಲಿಕ್ಕೆ ಕಾರಣ ಪಶ್ಚಿಮಘಟ್ಟಗಳಲ್ಲಿ ಇರುವ ನಮ್ಮ ಗಣಿಗಳು ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಈ ಗಣಿಗಳು ಮುಚ್ಚಲ್ಪಟ್ಟಿವೆ. ಅಲ್ಲಿ ಉದ್ಯೋಗಿಗಳನ್ನು ಹೆಚ್ಚಾಗಿ ನೇಮಕ ಮಾಡಿಕೊಂಡಿದ್ದರಿಂದ ಸಹ ಆಗಿದೆ. ಹಾಸನದಲ್ಲಿ ಇರುವ ಗಣಿಯನ್ನು ಇವತ್ತು ನಾವು ಪ್ರಾರಂಭ ಮಾಡುತ್ತಿದ್ದೇವೆ. ಬೇರೆ ಬೇರೆ ಕಡೆಯಿಂದ ನಾವು ಹಣವನ್ನು ಸಂಗ್ರಹಣೆ ಮಾಡಿ ಸರ್ಕಾರ ಅದಕ್ಕೆ ಬದ್ಧವಾಗಿದೆ. ನಾವು ಸಾಕಷ್ಟು ಸಲ ಸಭೆಗಳನ್ನು ಮಾಡಿದ್ದೇವೆ. ಸರ್ಕಾರ ಮ್ಯಾನೇಜ್‌ಮೆಂಟ್ ಜೊತೆ ಮಾತುಕತೆ ನಡೆಸಿ ಅನೇಕ ಸಮಸ್ಯೆಗಳನ್ನು ಸಹ ಬಗೆಹರಿಸಲು ಪ್ರಯತ್ನ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ಈಗ ಇರತಕ್ಕಂಥ ಉದ್ಯೋಗಿಗಳಿಗೆ ಉದ್ಯೋಗ ಸೃಷ್ಟಿ ಮಾಡತಕ್ಕಂಥ ಕೆಲಸ ಆಗಬೇಕು. ಕಾನೂನು ಇಲಾಖೆಯಲ್ಲಿ ಅವರಿಗೆ ಸಂಬಂಧಪಟ್ಟ ಫೈಲ್ ಇನ್ನೂ ಹಾಗೆಯೇ ಇದೆ. ಆ ಫೈಲ್ ಬೇಗ ಕ್ಲಿಯರ್ ಆದರೆ ಇರತಕ್ಕಂಥ ಖಾಲಿ ಉದ್ಯೋಗಿಗಳಿಗೆ ಹುದ್ದೆಗಳನ್ನು ಕೊಡುವುದಕ್ಕೆ ಬರುತ್ತದೆ. ಇದು ಸಾವಿರಾರು ಕುಟುಂಬಗಳ ಅನ್ನದ ಪರಿಸ್ಥಿತಿ ಇದೆ.

4.50 ಪಿಎಂ

ಶ್ರೀ ಎಸ್.ಸುರೇಶ್ ಕುಮಾರ್: ಶೂನ್ಯ ವೇಳೆಯಲ್ಲಿನ ಪ್ರಸ್ತಾವನೆಗೂ ಒಂದು ಕಾಲ ಮಿತಿಯನ್ನು ವಿಧಿಸುವುದರೊಂದಿಗೆ ಪ್ರಸ್ತಾವನೆಯನ್ನು ಮಾಡಲಿಚ್ಚಿಸುವವರಿಗೆ ಅವಕಾಶವನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಹೀಗೆ ಶೂನ್ಯ ವೇಳೆಗೆ ಸದನದ ಕಲಾಪದ ಇಷ್ಟೊಂದು ಕಾಲಾವಕಾಶವನ್ನು ಕೊಡುವುದಾದರೆ ಶಾಸನ ಸಭೆಯು ಶೂನ್ಯ ವೇಳೆಯ ಪ್ರಸ್ತಾವನೆಗಾಗಿಯೇ ಕರೆಯಲ್ಪಟ್ಟಿದೆಯೇ? ಎಂದು ಪ್ರಶ್ನಿಸಬೇಕಾಗುತ್ತದೆ. ಶಾಸನ ಸಭೆಯನ್ನು ಪ್ರಾಮುಖ್ಯವಾಗಿ ಕರೆದಿರುವುದು ಬೇಡಿಕೆಗಳ ಮೇಲಿನ ಚರ್ಚೆಗಾಗಿ. ಅದನ್ನೇ ಬಿಟ್ಟು ಉಳಿದ ಕಲಾಪಗಳನ್ನು ನಡೆಸಿಕೊಂಡು ಹೋಗುವುದಾದರೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದು ಬೇಡವೆ? ಎಲ್ಲಾ ಕಲಾಪಗಳಿಗೂ ಒಂದು ಕಾಲಮಿತಿ ಎಂದು ಇರಬೇಕು. ಹೀಗೆ ಮಾಡುವುದರಿಂದ ಬೇಡಿಕೆಗಳನ್ನು ಚರ್ಚೆ ಮಾಡದೇ ಪಾಸ್ ಮಾಡಿಸಿಕೊಂಡು ಹೋಗುವ ಸಂಪ್ರದಾಯ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಈಗ ಬೇಡಿಕಗಳ ಮೇಲೆ ಚರ್ಚೆ ನಡೆಯಬೇಕೋ ಶೂನ್ಯವೇಳೆಯ ಪ್ರಸ್ತಾವಕ್ಕೆ ಹೆಚ್ಚು ಸಮಯ ಇಡಬೇಕೋ ಎಂಬ ಬಗ್ಗೆ ಒಂದು ತೀರ್ಮಾನವನ್ನು ಕೊಡಿ. ಇಲ್ಲಿ ಕೇವಲ ಶೂನ್ಯವೇಳೆಗೆ ಸಮಯ ಮಿಸಲು ಇಡುವುದಾದರೆ ನಾವು ಇಲ್ಲಿ ಕುಳಿತುಕೊಂಡು ಏನು ಪ್ರಯೋಜನ?

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯ ಪ್ರಸ್ತಾವಕ್ಕೆ ಕಾಲಾವಕಾಶ ನೀಡಬಾರದು ಅಂದಾದರೆ ಅಡ್‌ಜರ್ನ್‌ಮೆಂಟ್ ಮೋಶನ್‌ಗೂ ಕೂಡ ವಿವಿಧ ಹಂತಗಳಲ್ಲಿ ಅಷ್ಟು ಕಾಲಾವಕಾಶ ಬೇಡಿ. ಅದನ್ನು ಕೂಡ ಕಡಿಮೆ ಮಾಡಬಹುದು.

ಉಪಾಧ್ಯಕ್ಷರು: ಮಾನ್ಯ ಸದಸ್ಯರುಗಳು ಶೂನ್ಯವೇಳೆಯ ಪ್ರಸ್ತಾಪಕ್ಕಾಗಿ ಓಟರ್ಸ್‌ಲಿಸ್ಟ್ ಕಳುಹಿಸಿದ ಹಾಗೆ 20-30 ಪ್ರಶ್ನೆಗಳನ್ನು ಕಳುಹಿಸಿದರೆ ನಾನು ಏನು ಮಾಡಬೇಕು? ನಾನು ತೆಗೆದುಕೊಂಡಿಲ್ಲ ಅಂದರೆ ಬಹಳ ಪ್ರಾಮುಖ್ಯವಾದ ವಿಚಾರ, ಅವಕಾಶ ಕೊಟ್ಟಿಲ್ಲ ಎಂದು ನೀವೇ ಹೇಳುತ್ತೀರಿ.

ಶ್ರೀ ಎಸ್.ಸುರೇಶ್ ಕುಮಾರ್: ಹಾಗಾದರೆ ಅಡ್ಜರ್ನ್‌ಮೆಂಟ್ ಮೋಶನ್ ಕೂಡ ಅರ್ಧ ಘಂಟೆಯಲ್ಲಿ ಮುಗಿಸಬೇಕು. 2-3ಗಂಟೆಗಳನ್ನು ಅದಕ್ಕೆ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ: ಹಾಗಾದರೆ ಶಾಸನಸಭೆಯಲ್ಲಿ ಅಡ್ಜರ್ನ್‌ಮೆಂಟ್ ಮೋಶನ್ ಮತ್ತು ಶೂನ್ಯವೇಳೆ ಪ್ರಸ್ತಾವನೆಗಳು ನಡೆಯುತ್ತಿರಲಿ. ಬೇರೆ ಯಾವ ವಿಚಾರ

ಪ್ರಸ್ತಾವನೆಗಳು ಬೇಡ ಎಂದು ಆಗಲಿ. ನಾವು ಅದಕ್ಕೆ ತಯಾರಾಗಿ ಬರುತ್ತೇವೆ. ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿಲ್ಲವೆಂದಾದರೆ ನಾವು ಬೇರೆ ಕೆಲಸವನ್ನು ಮಾಡುತ್ತೇವೆ. ಹೀಗೆ ಮಾಡಿದರೆ ಶಾಸನ ಸಭೆಯನ್ನು ಕರೆಯುವುದಾದರೂ ಏಕೆ? ಇನ್ನು ಸಭಾ ಕಲಾಪಗಳ ದಿನಗಳು ಎಷ್ಟು ಉಳಿದಿವೆ? ಬೇಡಿಕೆಗಳ ಮೇಲೆ ಚರ್ಚೆ ಆಗಬೇಡವೇ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ವಿವಿಧ ಬಾಬುಗಳಿಗಾಗಿ ವ್ಯಯ ಮಾಡುವ ಇಂಥ ಬೇಡಿಕೆಗಳ ಮೇಲಿನ ಚರ್ಚೆಯನ್ನು ನಾವು ಹೆಚ್ಚು ಸಮಯ ಕೊಟ್ಟು ಮಾಡಬೇಕಾಗುತ್ತದೆ. ಉಳಿದ ಕಲಾಪಗಳಿಗೆ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು.

ಶ್ರೀ ಬಿ.ಎ.ಮೊಯಿದ್ದೀನ್ (ಮಾನ್ಯ ಉನ್ನತ ಶಿಕ್ಷಣ ಸಚಿವರು): ಹಾಗಾದರೆ ಶೂನ್ಯವೇಳೆಯಲ್ಲಿನ ನೋಟೀಸ್‌ಗಳನ್ನು ಅಡ್ಮಿಟ್ ಮಾಡಬೇಡಿ ಎಂದು ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ: ಶೂನ್ಯವೇಳೆಗೆ ಒಂದು ಗಂಟೆಯ ಕಾಲಾವಕಾಶ ಎಂದು ಮಾಡಿ. ಉಳಿದ ಸಮಯವನ್ನು ಬಜೆಟ್‌ಗೆ ಎಂದು ಮೀಸಲು ಇಡಿ.

ಉಪಾಧ್ಯಕ್ಷರು: ಇನ್ನು ಎರಡು ಪ್ರಸ್ತಾವನೆಗಳು ಉಳಿದಿವೆ, ಅದನ್ನು ಮುಗಿಸೋಣ.

(ಜ) ರಾಜ್ಯದಲ್ಲಿನ ಪೌರಾಡಳಿತ ಇಲಾಖೆ ಕುರಿತು.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿನ ಪೌರಾಡಳಿತ ಇಲಾಖೆಯು ಕಾರ್ಯನಿರ್ವಹಿಸುತ್ತಿದೆಯೋ? ಇಲ್ಲವೋ ಎಂಬ ಸಂಶವು ಬರುತ್ತಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ವಾರಕ್ಕೆ ಒಬ್ಬ ಕಮೀಶನರ್ ಬಂದು ಆಡಳಿತ ನಡೆಸತಕ್ಕಂಥ ದುಸ್ಥತಿ ಬಂದಿದೆ. ಕಳೆದ ಒಂದು ತಿಂಗಳಲ್ಲಿ ವಾರಕೊಬ್ಬರು ಬಂದು ಆಡಳಿತ ಮಾಡುತ್ತಿದ್ದಾರೆ. ಕಮೀಶನರ್‌ಗಳ ನೇಮಕವಾಗುತ್ತದೆ, ವರ್ಗಾವಣೆಯಾಗುತ್ತದೆ, ಅವರಲ್ಲಿ ಕೋರ್ಟ್‌ನ ವ್ಯವಹಾರಗಳು ಆಗುತ್ತವೆ ಮುಂತಾಗಿ ನಡೆಯುತ್ತಿದೆ. ಈ ಅವಸ್ಥೆ ನಮ್ಮ ಸರಕಾರಕ್ಕೆ ಹೇಗೆ ಬಂತು? ಪೌರಾಡಳಿತ ಸಚಿವರಿಗೂ, ಜಿಲ್ಲಾ ಉಸ್ತುವಾರಿ ಸಚಿವರಿಗೂ ಏನಾದರೂ ಸಂಘರ್ಷ ಬಂದಿದೆಯೇ? ಎಡಿಬಿಯಿಂದ 216ಕೋಟಿ ರೂಪಾಯಿಗಳ ಸಾಲವು ಮಂಜೂರಾಗಿದೆ. ಈ ಒಂದು ಹಣದ ನೆರವಿನಿಂದಾಗಿ ಕಿತ್ತಾಟವು ನಡೆದಿದೆಯೆ? ಇದರಿಂದ ಜನರ ಮನಸ್ಸಿನಲ್ಲಿ ಇಂಥ ಅನೇಕ ಸಂಶಯಗಳು ಬರಲು ಕಾರಣವಾಗಿದೆ. ಮಾನ್ಯ ಸಚಿವರು ಈ ಕುರಿತು ತಮ್ಮ ಸ್ಪಷ್ಟೀಕರಣ ಕೊಡಬೇಕು. ಎಡಿಬಿಯಿಂದ ಸಾಲ ಪಡೆದು ಮಾಡುವ ಎಲ್ಲಾ ಕಾಮಗಾರಿಗಳನ್ನು ನೋಡಲು ಕಾವಲು ಸಮಿತಿಯು ರಾಜ್ಯದಾದ್ಯಂತ